ದಿನಾಂಕ 29-07-2022 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು : ಅರ್ಜಿದಾರ ಪರ ಶ್ರೀ. ಆರ್.ಎನ್.ಡಿ ವಕೀಲರಿಂದ:**

**ನನ್ನ ತಂದೆ ದಿನಾಂಕ 10.08.2020 ರಂದು ಮೃತಪಟ್ಟಿದ್ದಾರೆ. ನಾನು ಜಮಖಂಡಿಯಲ್ಲಿ ವಾಸವಾಗಿದ್ದೇನೆ. ನನ್ನ ತಂದೆ ಜಮಖಂಡಿಯಲ್ಲಿ ಮೃತಪಟ್ಟಿದ್ದಾರೆ. ನನ್ನ ತಂದೆ ಜಮಖಂಡಿಯಲ್ಲಿ ವಾಸವಾಗಿದ್ದರು. ನಾನು ಮತ್ತು ನಮ್ಮ ತಂದೆ ಒಂದೆ ಮನೆಯಲ್ಲಿ ವಾಸವಾಗಿದ್ದೇವು. ನಮ್ಮ ಮನೆತನದ ವ್ಯವಹಾರವನ್ನು ನಾನೇ ಮಾಡುತ್ತಿದ್ದೆ. ನಮ್ಮ ಮನೆತನಕ್ಕೆ ಸಂಬಂಧಪಟ್ಟಂತ ಆಸ್ತಿಗಳ ದಾಖಲಾತಿಗಳಿಗೆ ವ್ಯವಹಾರವನ್ನು ನಾನೇ ಮಾಡುತ್ತೇನೆ. ಇದೇ ನ್ಯಾಯಾಲಯದಲ್ಲಿ ಅರ್ಜಿದಾರ ದಾವೆ ಹಾಕಿದ ವಿಚಾರ ನನಗೆ ಗೊತ್ತಿದೆ. ಆ ಕೇಸಿನಲ್ಲಿ ನಮಗೆ ಕೊರ್ಟನಿಂದ ನೋಟಿಸು ಬಂದಿತ್ತು ಎಂದರೆ ಸರಿ. ಆ ನಂತರ ನಾವು ಮನೆಯಲ್ಲಿ ಕುಳಿತು ಚರ್ಚೆ ಮಾಡಿದ್ದೇವು ಎಂದರೆ ಸರಿ. ಓ ಎಸ ನಂ 86/2013 ದಿನಾಂಕ 03.03.2020 ರಂದು ನಮ್ಮ ತಂದೆ ಜೀವಿತ ಇದ್ದಾಗ ಡಿಕ್ರಿ ಆಗಿದೆ ಎಂದರೆ ಸರಿ. ದಾವೆಯಲ್ಲಿ ನಮ್ಮ ತಂದೆ ಹಾಜರು ಆಗಿರಲಿಲ್ಲ. ಮಲ್ಲವ್ವ ಶಿವಲಿಂಗಪ್ಪ ಅರಕೇರಿ ಎಂದರೆ ನನ್ನ ಹೆಂಡತಿ. ಆ ದಾವೆಯಲ್ಲಿ ನನ್ನ ಹೆಂಡತಿ ಪ್ರತಿವಾದಿ ನಂ 15 ಆಗಿದ್ದಳು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಹೆಂಡತಿಗೆ ನೋಟಿಸು ಬಂದಿರಲಿಲ್ಲ. ನನ್ನ ಹೆಂಡತಿ ರಾಮಪ್ಪ ರಾಯಪ್ಪ ತುಪ್ಪದವರ ಮಗಳು. ರಾಮಪ್ಪ ತುಪ್ಪದ 1986ರಲ್ಲಿ ಮೃತಪಟ್ಟಿದ್ದಾರೆ. ಸದರಿ ರಾಮಪ್ಪ ತುಪ್ಪದ ಇವರ ಹೆಂಡತಿ ಮಕ್ಕಳು ಆ ದಾವೆಯಲ್ಲಿ ಪಕ್ಷಗಾರರಾಗಿದ್ದರು ಎಂದರೆ ಸರಿ. ಸದರಿಯವರಿಗೆ ದಾವಾ ನೋಟಿಸು ಹೊಗಿದ್ದವು ಎಂದರೆ ಸರಿ.**

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೆ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ.